ಶ್ರೀ ಬಿ.ಬಿ. ನಿಂಗಯ್ಯ : ಸನ್ಮಾನ್ಯ ಉಪಾಧ್ಯಕ್ಷರೆ, ಅವರು ಬಹಳ ಪ್ರಮುಖವಾದ ವಿಚಾರವನ್ನು ಹೇಳಿದ್ದಾರೆ. ಜಾನುವಾರು ಆರೋಗ್ಯ ಮತ್ತು ಜನರ ಆರೋಗ್ಯ ಎರಡು ಪ್ರಮುಖವಾದ ಕ್ಷೇತ್ರಗಳೆಂದು ತಮಗೆ ಗೊತ್ತಿದೆ. ಇದು ಅಗತ್ಯಸೇವೆ ಅಡಿಯಲ್ಲಿ ಬರುತ್ತದೆ. ಹಾಗಾಗಿ ಇವತ್ತು ಜನಾರೋಗ್ಯ ಇಲಾಖೆಯಲ್ಲಿ ಶನಿವಾರ, ಭಾನುವಾರವೂ ಕೂಡ, ರಜಾದಿನಗಳಲ್ಲಿ ಮಧ್ಯಾಹ್ನದವರೆಗೆ ಏನು ಕೆಲಸ ಮಾಡುತ್ತಾರೆ. ಅದೇ ರೀತಿಯಲ್ಲಿ ಅಷ್ಟೇ ಪ್ರಮುಖವಾದ ಒಂದು ಈ ಕ್ಷೇತ್ರವಾದ್ದರಿಂದ ಜಾನುವಾರು ಆರೋಗ್ಯ ಪ್ರಮುಖವೆಂದು ಸರ್ಕಾರ ಇದನ್ನು ಪರಿಗಣಿಸಿದ್ದರಿಂದ ಭಾನುವಾರ ಅಥವಾ ರಜೆದಿನಗಳಲ್ಲಿ ಎಂಟೂವರೆ ಗಂಟೆಯಿಂದ ಹನ್ನೆರಡೂವರೆ ಗಂಟೆಯವರೆಗೆ ಕೆಲಸ ಮಾಡುವುದು ಮೊದಲಿನಿಂದಲೂ ಬಂದಿದೆ. ಈಗ ತಾವೇನು ಸಲಹೆಯನ್ನು ಹೇಳಿದ್ದೀರಿ ಇದನ್ನು ಸರ್ಕಾರ ಪರಿಶೀಲಿಸುತ್ತದೆ.

ರಾಷ್ಟ್ರೀಯ ಮಟ್ಟದ ಸೈಕ್ಲಿಂಗ್ ಸ್ಪರ್ಧೆ

183 - ಶ್ರೀ ಶಿವಾನಂದ ಎಸ್. ಪಾಟೀಲ್ (ತಿಕೋಟಾ) : ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಇತ್ತೀಚೆಗೆ ನಡೆದ ರಾಷ್ಟ್ರೀಯ ಮಟ್ಟದ ಸೈಕ್ಲಿಂಗ್ ಸ್ಪರ್ಧೆಯಲ್ಲಿ ರಾಜ್ಯದ ಕ್ರೀಡಾ ಪಟುಗಳು ರಾಜ್ಯಕ್ಕೆ ಕೀರ್ತಿ ತರುವ ಪ್ರಶಸ್ತಿಗಳನ್ನೇನಾದರೂ ಪಡೆದಿದ್ದಾರೆಯೇ?*

ಆ) *ಎಷ್ಟು ಪ್ರಶಸ್ತಿಗಳನ್ನು ಪಡೆದಿದ್ದಾರೆ ಹಾಗೂ ರಾಜ್ಯದಲ್ಲಿ ಯಾವ ಯಾವ ಜಿಲ್ಲೆಯವರಾಗಿದ್ದಾರೆ ಅವರ ಪೂರ್ತಿ ವಿವರ ಕೊಡುವುದು?*

ಇ) *ಬಿಜಾಪುರ ಸೈಕಲ್ ಪಟುಗಳಿಗೆ ವೆಲೊಡ್ರೊಮ್‌ನ ಕೊರತೆ ಇದೆಯೇ? ಹಾಗಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮ ಏನು? ಹಾಗೂ ಸರ್ಕಾರವು ಅವರಿಗಾಗಿ ಕೊಟ್ಟಂತಹ ಉತ್ತೇಜನ ಏನು?*

ಶ್ರೀ ಅಜಯ್‌ಕುಮಾರ್ ಸರನಾಯಕ್ (ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು) :

ಅ) ಹೌದು

ಆ) ವಿವರಗಳನ್ನು ಲಗತ್ತಿಸಿದೆ. ಪದಕ ಪಡೆದ ಎಲ್ಲಾ ಸೈಕಲಿಸ್ಟ್ (ಸೈಕಲ್ ಪಟುಗಳು) ಬಿಜಾಪುರ ಜಿಲ್ಲೆಯವರಾಗಿರುತ್ತಾ ರೆ.

ಇ) ಹೌದು. ಅದಕ್ಕಾಗಿ 10ನೇ ಹಣಕಾಸು ಆಯೋಗದಲ್ಲಿ ರೂ. 20.00 ಲಕ್ಷ ಹಣವನ್ನು ಇಟ್ಟಿದ್ದು ಕೇಂದ್ರ ಸರ್ಕಾರದ ಅನುದಾನ ಪಡೆಯಲು ಕ್ರಮಕೈಗೊಳ್ಳಲಾಗುತ್ತಿದೆ. ಸೈಕಲ್ ಪಟುಗಳು ರಾಷ್ಟ್ರೀಯ ಪಂದ್ಯಾವಳಿಗಳಲ್ಲಿ ಭಾಗವಹಿಸಲು ಸಹಾಯಧನ ನೀಡಲಾಗುತ್ತದೆ. ಮತ್ತು ಪ್ರತಿಭಾವಂತ ಸೈಕಲ್ ಪಟುಗಳನ್ನು ಇಲಾಖೆಯ ನಡೆಸುತ್ತಿರುವ ಕ್ರೀಡಾ ಹಾಸ್ಟೆಲ್‌ಗಳಲ್ಲಿ ಸೇರಿಸಿಕೊಂಡು ವಿದ್ಯೆ ಮತ್ತು ವೈಜ್ಞಾನಿಕ ಕ್ರೀಡಾ ತರಬೇತಿ ನೀಡಲಾಗುತ್ತಿದೆ. ಇದಕ್ಕಾಗಿ ತಗಲುವ ಎಲ್ಲಾ ವೆಚ್ಚಗಳನ್ನು ಸರ್ಕಾರ ಭರಿಸುತ್ತದೆ.

LIST OF CYCLISTS WHO WON THE MEDALS IN THE II NATIONAL ROAD CYCLING CHAMPIONSHIP HELP AT CALCUTTA

40 K.M. Team Time Trails (Men) Ist place

1.	V.K. Rajputh	3.	N.H. Gali
4.	V.Y. Y.Borge	4.	S.M. Katbar

20 KM Team Time Trials (Boys) II place

1.	P.M. Kathar	3.	M.H. Hirekurbar
2.	R.B.Yentane	4.	N.H. Ambi

20 KM Team Time Trials(Women) II place

1.	Alks Padthare	3.	Shameena Shaik
2.	Sheela Patil	4.	Gangu Biradar

10 KM Individual Time Trials (Girls) N.B. Yenthute -III place

10 KM Time Trials (Women): Sheela Patil - I place

5 KM Time Trials (Girls)	:	Premalatha Sureban	II place
		Ganga Biradar	III place
80 KM Road Race (Men)	:	Vittal Borage	II place
		Lakshmana Mali	IV place
10 KM Individual Time Trials (Men)		V.K. Rajmatha	III place
20 KM Road Race (Boys)		P.M. Katbar	
		R.V. Yentuthe	
		R.B. Yentuthe	
		M.H. Hirekurbar	
10KM Road Race (Girls)		Premalath Sureban	I place
		Gangu Biradar	II place
20KM Road Race (Women)		Sheela Patil	V place

LIST OF CYCLISTS WHO WON THE MEDALS IN THE 50TH SEN NATIONAL CYCLING CHAMPIONSHIP HELD AT PUNE.

Women Team

3 KM Team persuit	III place
Premalatha V. Sureban 3 KM individual persuit	III place

LIST OF CYCLISTS WHO WON THE MEDALS IN THE 27TH JUNIOR & 13TH SUB JUNIOR NATIONALS TRACK CYCLING CHAMPION AT HYDERBAD

1.	Parasappa Katabar	III place in 1000 Mtrs. Massed start
2.	Premalatha V.Sureban	II place in 5 km.pt. Race
3.	Premalath V. Sureban	I place in 1000Mtrs. Massed Start
4.	Sandeep Athani (Sub-Jr)	II place in 500 Mtrs. Time Trial
5.	Sandeep Athani (Sub-Jr)	III place in 1 km individual persuit

ಶ್ರೀ ಶಿವಾನಂದ ಎಸ್. ಪಾಟೀಲ್ : ಸನ್ಮಾನ್ಯ ಉಪಾಧ್ಯಕ್ಷರೆ, ಇವತ್ತು ಸುದೈವದ ಸಂಗತಿ ಏನೆಂದರೆ, ಕೊನೆಯಪಕ್ಷ ನಮ್ಮ ಜಿಲ್ಲೆಯವರೇ ಸಚಿವರಾಗಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಇಷ್ಟಾದರೂ ಸೈಕ್ಲಿಸ್ಟ್ ಪಟುಗಳು ಇದ್ದಾರೆನ್ನುವುದು ಅವರ ಗಮನಕ್ಕೆ ಬಂದಿದ್ದು ಒಂದು ಸುದೈವದ ಸಂಗತಿ. ಇನ್ನೊಂದು ಕಡೆ ದುರ್ದೈವದ ಸಂಗತಿ ಏನೆಂದರೆ, ಅವರು ನಮ್ಮ ಜಿಲ್ಲೆಯವರಾಗಿದ್ದು, ಇಡೀ ರಾಷ್ಟ್ರದಲ್ಲಿ ಈ ವರ್ಷ ಎಷ್ಟು ಬಹುಮಾನಗಳನ್ನು ತಂದುಕೊಟ್ಟಿದ್ದಾರೆ, ಅವರೆಲ್ಲಾ ಬಿಜಾಪುರದ ಜಿಲ್ಲೆಯವರಾಗಿದ್ದಾರೆ. ಆದರೆ ನಮ್ಮ ಸಚಿವರಾಗಿರುವವರಿಗೆ ಅಲ್ಲಿ ಕೊರತೆ ಏನೆಂಬುದು ಇದುವರೆಗೆ ತಿಳಿದಿಲ್ಲವೆನ್ನುವುದು ಒಂದು ದುರ್ದೈವದ ಸಂಗತಿ. ಕಾರಣ, ಅವರು ವೆಲೊಡ್ರಮ್ (Velodrome) ಸಲುವಾಗಿ ಬಡಿದಾಡತಕ್ಕಂಥದ್ದು ಕಳೆದ ಐದಾರು ವರ್ಷದಿಂದ, ಅದರಲ್ಲಿ ಇವರು ಸಚಿವರಾದ ಮೇಲೂ ಕೂಡ ಎರಡು ಮೂರು ಸಾರಿ ಇದರ ಬಗ್ಗೆ ಅವರ ಗಮನಕ್ಕೆ ಬಂದಿರಬಹುದು. ಮೇಲಾಗಿ, ಆ ಮೆಲೊಡ್ರಮ್ (velodrome) ಮಾಡುವುದಕ್ಕೆ ಸ್ವಲ್ಪಮಟ್ಟಿಗೆ ಹಣವನ್ನು ಖರ್ಚು ಮಾಡಿ ಈಗಾಗಲೇ ಪ್ರಯತ್ನವನ್ನು ಮಾಡಿದ್ದಾರೆ. ಅದನ್ನು ಆದಷ್ಟು ತೀವ್ರವಾಗಿ ಮಾಡಬೇಕಾಗಿತ್ತು ಇದುವರೆಗೆ ಮಾಡಿಲ್ಲ. ಮತ್ತೆ ಇವತ್ತು ಉತ್ತರದಲ್ಲಿ ಹತ್ತನೇ ಹಣಕಾಸು ಆಯೋಗದಲ್ಲಿ ಪ್ರಾವಿಷನ್ ಮಾಡಿದ್ದೇವೆ, ಅದು ಬಂದ ಮೇಲೆ ಮಾಡುತ್ತೇವೆಂದು ಹೇಳಿದ್ದಾರೆ. ನಾನು ಹೇಳುವುದೇನೆಂದರೆ, ಕೇಂದ್ರ ಸರ್ಕಾರದಿಂದ ಬರುವತನಕ ತಾವು ಕಾಯ್ದು, ಮತ್ತ ಈಗಾ [illegible] ಅಂತರಾಷ್ಟ್ರೀಯಮಟ್ಟದಲ್ಲಿ ಸೈಡ

ತಮ್ಮ ಪ್ರದರ್ಶನವನ್ನು ತೋರಿಸಿದ್ದಾರೆ. ಒಲಂಪಿಕ್‌ನಲ್ಲೂ ಕೂಡ ಯಾವುದಾದರೂ ಒಂದು ಪದಕವನ್ನು ತರತಕ್ಕಂಥ ಅವಕಾಶವಿತ್ತು, ದುರ್ದೈವದ ಸಂಗತಿ ಏನೆಂದರೆ, ಅವರಿಗೆ ಯಾವುದೇ ಸರ್ಕಾರದ ಸವಲತ್ತು ಸಿಗದೇ ಇದ್ದಕ್ಕೆ ಅವರು ಆ ಬಹುಮಾನ ತರುವುದಕ್ಕೆ ಸಾಧ್ಯವಾಗಲಿಲ್ಲ. ಈಗ ತಾವೇ ನಮ್ಮ ಜಿಲ್ಲೆಯವರಿರುವುದರಿಂದ, ಮೇಲಾಗಿ ನಮ್ಮ ಜಿಲ್ಲೆಯ ಕ್ರೀಡಾಪುಟಗಳು, ರಾಜ್ಯದಲ್ಲಿ ಅಷ್ಟೇ ಅಲ್ಲ, ರಾಷ್ಟ್ರಮಟ್ಟದಲ್ಲಿ ಮೆರೆಯುತ್ತಿದ್ದಾರೆ, ಆದಷ್ಟು ತೀವ್ರವಾಗಿ ಈ ವೆಲೊಡ್ರಾಮ್ ಮಾಡುವುದಕ್ಕೆ ತಾವು ಸರ್ಕಾರದ ವತಿಯಿಂದ ಏನು ಕ್ರಮ ಕೈಗೊಳ್ಳುತ್ತೀರಿ? ಮತ್ತೆ, ಈಗಾಗಲೇ ಲ್ಯಾಂಡ್ ಆರ್ಮಿಯಿಂದ ಸ್ವಲ್ಪ ಹಣವನ್ನು ಖರ್ಚು ಮಾಡಿರುವುದು ತಮ್ಮ ಗಮನದಲ್ಲಿರಬಹುದು ಎಷ್ಟು ಖರ್ಚು ಮಾಡಿದ್ದಾರೆ? ಮತ್ತೆ ಇನ್ನು ಉಳಿದ ಹಣವನ್ನು ಆ ಹತ್ತನೇ ಹಣಕಾಸು ಆಯೋಗದಿಂದ ಬರುವುದಕ್ಕಿಂತ ಮೊದಲು ತಾವೇ ಎಲ್ಲಿಂದಲಾದರೂ ಒದಗಿಸಿಕೊಡುತ್ತೀರೇನು ಎನ್ನುವುದಕ್ಕೆ ತಾವು ಉತ್ತರ ಹೇಳಬೇಕು.

ಶ್ರೀ ಅಜಯಕುಮಾರ್ ಸರ್‌ನಾಯಕ್ : ಸನ್ಮಾನ್ಯ ಉಪಾಧ್ಯಕ್ಷರೆ, ಈ ಬಿಜಾಪುರ ಜಿಲ್ಲೆಯಲ್ಲಿರುವ ಸೈಕ್ಲಿಸ್ಟ್‌ಗಳು ನಮ್ಮ ರಾಜ್ಯಕ್ಕೆ ಅಷ್ಟೇ ಅಲ್ಲ, ಇಡೀ ರಾಷ್ಟ್ರಕ್ಕೆ ಕೀರ್ತಿಯನ್ನು ತಂದಿರುವುದು ಎಲ್ಲರಿಗೂ ಗೊತ್ತಿರುವ ವಿಷಯ. ಮೊನ್ನೆ ಕಲ್ಕತ್ತದಲ್ಲಿ ರಾಷ್ಟ್ರೀಯ ಕ್ರೀಡೆ ಏನು ನಡೆಯಿತು ಅದರಲ್ಲಿ ಹದಿಮೂರು ಪದಕಗಳು ಬಂದರೆ, ಆ ಎಲ್ಲಾ ಹದಿಮೂರು ಕ್ರೀಡಾಪಟುಗಳು ಬಿಜಾಪುರ ಜಿಲ್ಲೆಯವರೇ ಇದ್ದರು. ಆದರೆ ಬಿಜಾಪುರ ಜಿಲ್ಲೆಯಲ್ಲಿ ಈಗಾಗಲೇ ಜಿಲ್ಲಾಮಟ್ಟದ ಕ್ರೀಡಾಂಗಣವಿದೆ, ಈ ಕ್ರೀಡಾಂಗಣದಲ್ಲಿ ಸೈಕಲ್ ಟ್ರ್ಯಾಕ್ ಮಾಡುವುದಕ್ಕೆ ಈಗಾಗಲೇ ನಾವು ಒಂದು ಕ್ರಮವನ್ನು ತೆಗೆದುಕೊಂಡಿದ್ದೇವೆ, ಆದರೆ ಅದು ಅಷ್ಟಕ್ಕೆ ಸಾಕಾಗುವುದಿಲ್ಲ. ಫುಲ್‌ಫ್ಲಡ್ಜ್ ಒಂದು ವೆಲೊಡ್ರಾಮ್ ಮಾಡಬೇಕೆಂದು ನಾವು ಈಗಾಗಲೇ ತೀರ್ಮಾನವನ್ನು ಕೈಗೊಂಡಿದ್ದೇವೆ. ಸನ್ಮಾನ್ಯ ಉಪಾಧ್ಯಕ್ಷರೆ, ನಾವು ಈ ರಾಷ್ಟ್ರೀಯ ಕ್ರೀಡೆಗಳನ್ನು ನಡೆಸುವ ಸಂದರ್ಭದಲ್ಲಿ ಈ ವೆಲೋಡ್ರಾಮ್ ಮಾಡಬೇಕೆಂದು ಈಗಾಗಲೇ ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಆದರೆ ಈ ವೆಲೊಡ್ರಾಮ್ ಅನ್ನು ಬಿಜಾಪುರ ಜಿಲ್ಲೆಯಲ್ಲೇ ಮಾಡಬೇಕೆಂದು ನಾವು ಈಗಾಗಲೇ ಒಂದು ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಹತ್ತನೇ ಯೋಜನೆಯಲ್ಲಿ ನಾವೇನು ಈಗ ಕೇಂದ್ರ ಸರ್ಕಾರದ ಅನುಮತಿಗೆಕಾಯುತ್ತಿದ್ದೇವೆ, ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಿಗೆ ಭರವಸೆ ಕೊಡುವುದೇನೆಂದರೆ, ಆ ಅನುಮತಿಗೆ ನಾವು ಕಾಯವುದಿಲ್ಲ, ಏಕೆಂದರೆ ಅದು ಕೇವಲ ಒಂದು ಇಪ್ಪತ್ತು ಲಕ್ಷದ್ದು ಮಾತ್ರ ಇದೆ. ಅಂತರಾಷ್ಟ್ರೀಯ ಮಟ್ಟದ ಈ ಒಂದು ವೆಲೊಡ್ರಾಮ್ ನಿರ್ಮಾಣ ಮಾಡಬೇಕೆಂದರೆ ಕನಿಷ್ಟ ಮೂರು ಕೋಟಿ ರೂಪಾಯಿಗಳು ಬೇಕಾಗುತ್ತದೆ. ಈ ಹಣವನ್ನು ನಾವು ಎಲ್ಲಿಂದಾದರೂ ತೆಗೆದುಕೊಂಡು ಬಂದು, ನಾವೇನು ಈ ರಾಷ್ಟ್ರೀಯ ಕ್ರೀಡೆಯನ್ನು ಮೇ ತಿಂಗಳಲ್ಲಿ ನಡೆಸಬೇಕೆಂದು ಈಗಾಗಲೇ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ, ಈ ರಾಷ್ಟ್ರೀಯ ಕ್ರೀಡೆ ಪ್ರಾರಂಭವಾಗುವ ಹೊತ್ತಿಗೆ ಈ ವೆಲೊಡ್ರಾಮ್ ಸಿದ್ಧವಾಗುವುದಿಲ್ಲ. ಆದರೆ ನಾನು ಒಂದು ಭರವಸೆಯನ್ನು ಕೊಡುತ್ತೇನೆ, ಈ ವೆಲೊಡ್ರಾಮಅನ್ನು ಬಿಜಾಪುರ ಜಿಲ್ಲೆಯಲ್ಲಿ ನಿರ್ಮಾಣ ಮಾಡುವ ಕಾರ್ಯಕ್ರಮವನ್ನು ಸರ್ಕಾರ ಕೈಗೊಳ್ಳುತ್ತದೆ.

ಶ್ರೀ ಶಿವಾನಂದ ಎಸ್. ಪಾಟೀಲ್ : ಅವರಿಗೆ ಗೊತ್ತಿದೆ, ಇವತ್ತ ಬಿಜಾಪುರ ಜಿಲ್ಲೆಯವರು ರಾಷ್ಟ್ರಮಟ್ಟಕ್ಕೆ, ಅಂತರಾಷ್ಟ್ರೀಯ ಮಟ್ಟಕ್ಕೆ ಸ್ಪರ್ಧೆ ಮಾಡುವ ಶಕ್ತಿಯುಳ್ಳವರಾಗಿದ್ದರೂ ಕೂಡ ಅವರು

ಇವತ್ತು ಪ್ರಾಕ್ಟೀಸ್‌ಗೆ ರಸ್ತೆ ಮೇಲೆ ಹೋಗಬೇಕಾಗುತ್ತದೆ. ಆ ರಸ್ತೆಗಳು ಯಾವ ಸ್ಥಿತಿಯಲ್ಲಿದ್ದಾವೆಂದು ತಮಗೆ ಗೊತ್ತಿದೆ. ಸುದೈವ ವಶಾತ್ ಒಂದು ನ್ಯಾಷನಲ್ ಹೈವೇ ರೋಡ್ ಇದೆ, ಅವರು ಈ ರೋಡ್ ಮೇಲೆ ಪ್ರಾಕ್ಟೀಸ್ ಮಾಡುತ್ತಾರೆ. ಅಲ್ಲಿ ಎಷ್ಟೋ ಅಪಘಾತಗಳಾಗಿ ಅದರಲ್ಲಿ ಒಂದೆರಡು ಕ್ರೀಡಾಪಟುಗಳಿಗೆ ಅಪಘಾತವಾಗಿರುವುದು ತಮ್ಮ ಗಮನಕ್ಕೆ ಬಂದಿದೆಯೋ ಇಲ್ಲವೋ ಎನ್ನುವುದು ನನಗೆ ಗೊತ್ತಿಲ್ಲ. ಆದರೆ ಅಲ್ಲಿ ಇವರು ಪ್ರಾಕ್ಟೀಸ್ ಮಾಡುವುದಕ್ಕಾದರೂ ಈ ಸ್ಟೇಡಿಯಂನಲ್ಲಿರುವ ಒಂದು ಟ್ರ್ಯಾಕ್ ಏನಿದೆ ಅದನ್ನಾದರೂ ಸಿದ್ದಮಾಡಿರಿ. ಮತ್ತೆ ತಾವು ಈ ವೆಲೊಡ್ರಾಮ್‌ಗೆ ಮೂರು ಕೋಟಿ ರೂಪಾಯಿಗಳು ಖರ್ಚಾಗುತ್ತದೆನ್ನುವ ಮಾತನ್ನು ಹೇಳಿದಿರಿ, ಆದರೆ ಇವತ್ತು ಬೆಂಗಳೂರಿನಲ್ಲಿ ರಾಷ್ಟ್ರೀಯ ಕ್ರೀಡೆ ಮಾಡುವುದಕ್ಕೆ ನೂರು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೀರಿ. ಮತ್ತೆ ಯಾರು ರಾಜ್ಯಕ್ಕೆ ಕೀರ್ತಿ ತಂದು ಕೊಡುತ್ತಾರೆ, ಈ ದೇಶಕ್ಕೆ ಕೀರ್ತಿ ತಂದು ಕೊಡುತ್ತಾರೆ, ಅವರಿಗೆ ಒಂದು ಅವಕಾಶವನ್ನು ಅವರ ಜಿಲ್ಲೆಯಲ್ಲೇ ಕಲ್ಪಿಸಿಕೊಟ್ಟರೆ ಅವರು ಇನ್ನು ಹೆಚ್ಚಿಗೆ ನಿಮ್ಮ ಇಲಾಖೆಗೆ ಕೀರ್ತಿಯನ್ನು ತರುವುದು ಬೇಡ ನಿಮಗೇ ಒಂದು ಕೀರ್ತಿ ತರತಕ್ಕಂಥ ಪ್ರಯತ್ನವನ್ನು ಅವರು ಮಾಡುತ್ತಾರೆ. ಆದಷ್ಟು ನಿರ್ದಿಷ್ಟವಾಗಿ ಎಷ್ಟು ದಿವಸಗಳಲ್ಲಿ ಬಿಜಾಪುರದಲ್ಲಿ ವೆಲೊಡ್ರಾಮ್ ಅನ್ನು ತಾವು ಮಾಡುತ್ತೀರಿ?

ಶ್ರೀ ಅಜಯ್‌ಕುಮಾರ್ ಸರ್ ನಾಯಕ್ : ಸನ್ಮಾನ್ಯ ಉಪಾಧ್ಯಕ್ಷರೆ, ನಾನು ಈಗಾಗಲೇ ಹೇಳಿದ್ದೇನೆ, ಬಿಜಾಪುರದ ಸೈಕ್ಲಿಸ್ಟ್ ಕೇವಲ ರಾಜ್ಯಮಟ್ಟದಲ್ಲಿ ಅಷ್ಟೇ ಅಲ್ಲ, ರಾಷ್ಟ್ರಮಟ್ಟದಲ್ಲಿಯೂ ಕೂಡ ಸಾಕಷ್ಟು ಕೀರ್ತಿಯನ್ನು ತಂದಿದ್ದಾರೆ, ಅದರ ಬಗ್ಗೆ ಪ್ರಶ್ನೆಯೇ ಇಲ್ಲ. ಆದರೆ ಈಗಾಗಲೇ ಏನು ಜಿಲ್ಲಾ ಕ್ರೀಡಾಂಗಣವಿದೆ, ಅಲ್ಲಿ ಒಂದು ಟ್ರ್ಯಾಕ್ ಮಾಡಬೇಕೆಂದು ಕ್ರಮವನ್ನು ತೆಗೆದುಕೊಂಡಿದ್ದೇವೆ. ಇನ್ನು ಸ್ವಲ್ಪ ಕೆಲಸ ಉಳಿದಿದೆ, ಅದನ್ನು ಸಾಧ್ಯವಾದಷ್ಟು ಮಟ್ಟಿಗೆ ತೀವ್ರವಾಗಿ ಮುಗಿಸುತ್ತೇವೆ. ಟ್ರ್ಯಾಕ್‌ಗೆ ಅಸ್ಪಾಲ್ಟಿಂಗ್ ಆಗಬೇಕು, ಬೇಸ್ ರೆಡಿ ಇದೆ, ಆ ಅಸ್ಪಾಲ್ಟಿಂಗ್ ಕೆಲಸವನ್ನು ತೀವ್ರವಾಗಿ ಮುಗಿಸುತ್ತೇವೆ. ಅಂತರಾಷ್ಟ್ರೀಯ ಮಟ್ಟದ ವೆಲೊಡ್ರಾಮ್ ಏನು ಮಾಡಬೇಕು, ಅದನ್ನು ಸಾಧ್ಯವಾದಷ್ಟು ಮಟ್ಟಿಗೆ ತೀವ್ರವಾಗಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಶಿವಾನಂದ ಎಸ್. ಪಾಟೀಲ್ : ಆ ಟ್ರ್ಯಾಕ್ ಅನ್ನು ಕೂಡ ಅರ್ಧಕ್ಕೆ ಮಾಡಿ ಮೂರು ವರ್ಷವಾಯಿತು. ಸ್ಟೇಡಿಯಂನಲ್ಲಿ ಕೊನೆಯಪಕ್ಷ ಪ್ರಾಕ್ಟೀಸ್ ಮಾಡುವ ಈ ಟ್ರ್ಯಾಕ್ ಏನಿದೆ ಲ್ಯಾಂಡ್ ಆರ್ಮಿಯವರು ಮಾಡಿ ಮೂರು ವರ್ಷವಾಯಿತು, ಅದನ್ನೆ ಎಷ್ಟು ದಿವಸಗಳಲ್ಲಿ ಮಾಡುತ್ತೇವೆನ್ನುವುದನ್ನು ಹೇಳಿ. ಮತ್ತೆ ವೆಲೊಡ್ರಾಮ್ ಮಾಡುವುದಕ್ಕೆ ನಿರ್ದಿಷ್ಟ ದಿನಾಂಕವನ್ನು ಹೇಳಿಲ್ಲ, ನಿಮ್ಮ ಅಧಿಕಾರಾವಧಿಯಲ್ಲಿ ಅದು ಆಗಲಿ ಎಂದು ನಮ್ಮ ಆಶಯವಾಗಿದೆ. ಅದಕ್ಕೆ ಏನಾದರೂ ಒಂದು ನಿರ್ದಿಷ್ಟವಾದ ದಿನಾಂಕವನ್ನು ಹೇಳಿ.

ಶ್ರೀ ಅಜಯ್‌ಕುಮಾರ್ ಸರನಾಯಕ್ : ವೆಲೊಡ್ರಾಮ್ ಅನ್ನು ನನ್ನ ಅಧಿಕಾರಾವಧಿಯಲ್ಲಿ ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.